ಕೋಮಾದಿಂದ ಎದ್ದ ನಂತರ...
ಪೇಶೆಂಟ್: ಡಾಕ್ಟ್ರೆ ನನಗೇನಾಗಿತ್ತು?
ಡಾಕ್ಟರ್: ಏನಿಲ್ಲ ಸ್ವಲ್ಪ ಹೊತ್ತು ನಿಮ್ಮ ಇಂಟರ್ನೆಟ್ ಬಂದ್ ಆಗಿತ್ತು. ಆ ಶಾಕ್‌ಗೆ ಕೋಮಾಗೆ ಹೋಗಿದ್ರಿ ಅಷ್ಟೆ.

ಟೀಚರ್: ಭೂಮಿ ಮತ್ತು ಚಂದ್ರನ ನಡುವೆ ಎಷ್ಟು ದೂರ ಇದೆ?
ಗುಂಡ: ಬರೀ ಎರಡು ಕಿಲೋ ಮೀಟರ್! ಭೂಮಿ ರಾಜಾಜಿನಗರದಲ್ಲಿದ್ರೆ, ಚಂದ್ರ ಮಲ್ಲೇಶ್ವರಂನಲ್ಲಿರ್ತಾನೆ ಮೇಡಂ.

ಮಗ: ಅಪ್ಪ ನಿಮಗೆ ಒಂದು ಕೋಟಿ ಲಾಟರಿ ಹೊಡೆಯುತ್ತೆ, ಅವತ್ತೆ ಮಮ್ಮಿ ಕಿಡ್ನಾಪ್ ಆಗಿಬಿಟ್ರೆ ಏನ್ ಮಾಡ್ತೀರಿ?
ಅಪ್ಪ: ಸಾಧ್ಯಾನೇ ಇಲ್ಲ, ಒಂದೇ ದಿನಕ್ಕೆ ಎರಡೆರಡು ಲಾಟರಿ ಹೊಡೆಯಲ್ಲ ಮಗನೆ.

ಟೀಚರ್: ಈಜಿಪ್ಟ್ ಮಮ್ಮಿಗೂ, ಇಂಡಿಯನ್ ಮಮ್ಮಿಗೂ ಏನು ವ್ಯತ್ಯಾಸ ಹೇಳು ಗುಂಡ?
ಗುಂಡ: ಈಜಿಪ್ಟ್ ಮಮ್ಮಿ ನೋಡಿ ಮಕ್ಕಳು ಭಯ ಪಡ್ತಾರೆ, ಇಂಡಿಯನ್ ಮಮ್ಮಿ ನೋಡಿ ಡ್ಯಾಡಿ ಭಯ ಪಡ್ತಾರೆ ಟೀಚರ್!

ಗುಂಡ ಹೋಂ ವರ್ಕ್ ಮಾಡದೆ ಶಾಲೆಗೆ ಹೋಗಿದ್ದರಿಂದ ಗಣಿತದ ಮೇಷ್ಟು ಸಿಕ್ಕಾಪಟ್ಟೆ ಹೊಡೆದರು. ಸಿಕ್ಕಾಪಟ್ಟೆ ಕೋಪದಿಂದ ಗುಂಡ, ಸೀದಾ ಮೇಷ್ಟು ಮನೆಗೆ ಹೋಗಿ ಬಾಗಿಲು ತಟ್ಟಿದ. ಮೇಷ್ಟ ಹೆಂಡತಿ ಬಾಗಿಲು ತೆಗೆದರು.
ಗುಂಡ: ಇದು ಮೇಷ್ಟು ಮನೆ ತಾನೆ?
ಮೇಷ್ಟ ಹೆಂಡತಿ: ಹೌದು.
ಗುಂಡ: ನೀವ್ಯಾರು?
ಮೇಷ್ಟ ಹೆಂಡತಿ: ನಾನು ಅವರ ಹೆಂಡತಿ.
ಗುಂಡ: ಹೌದಾ? ಮತ್ತೆ ಮೇಷ್ಟ ಹತ್ರ ಬರೋ ಹೆಂಗಸು ಯಾರು?
ಅಲ್ಲಿಗೆ ಗುಂಡ ಮೇಷ್ಟ ಮೇಲೆ ಸೇಡು ತೀರಿಸಿಕೊಂಡ.

ಹೆಂಡತಿ: ಡಾಕ್ಟರ್ ಏನಂದ್ರು?
ಗಂಡ: ಏನಿಲ್ಲ, ಔಷಧಿ ಕೊಟ್ಟಿದ್ದಾರೆ.
ಹೆಂಡತಿ: ನಿಮ್ಮ ಸಮಸ್ಯೆಗಳನ್ನೆಲ್ಲ ಹೇಳಿದ್ರಿ ತಾನೆ?
ಗಂಡ: ಇಲ್ಲ, ನಿನ್ನ ಬಗ್ಗೆ ಏನೂ ಹೇಳಿಲ್ಲ.

ಗುಂಡ: ನಾನು ಮದುವೆಗೆ ಮುಂಚೆ ಪಾತ್ರೆ ತೊಳೀತಾ ಇದ್ದೆ.
ತಿಮ್ಮ: ಮತ್ತೆ ಈಗ?
ಗುಂಡ: ಮದುವೆ ಆದ ಮೇಲೆ ನನ್ನ ಹೆಂಡತಿ ಹತ್ರ, ಒಂದು ವರ್ಷ ಚೆನ್ನಾಗಿ ಇಂಗ್ಲಿಷ್ ಕಲಿತೆ.
ತಿಮ್ಮ: ಆಮೇಲೆ?
ಗುಂಡ: ಇವಾಗ ಪಾತ್ರೆ ವಾಷ್ ಮಾಡ್ತಿದ್ದೀನಿ.







ತಿಮ್ಮ: ಬೊಗಳೋ ನಾಯಿ ಕಚ್ಚೋದಿಲ್ಲ ಯಾಕೆ?
ಗುಂಡ: ಏಕೆಂದರೆ ಒಂದೇ ಸಮಯದಲ್ಲಿ ಎರಡು ಕೆಲಸ ಮಾಡುವುದಕ್ಕೆ ಆಗೋದಿಲ್ಲ ಅದಕ್ಕೆ.

ಭಿಕ್ಷುಕ: ಏನಾದ್ರೂ ತಿನ್ನೋಕೆ ಕೊಡಿ ಸರ್, ನೀವು ಸ್ವರ್ಗಕ್ಕೆ ಹೋಗ್ತೀರಾ?
ಗುಂಡ: ನಿನಗೆ ಬೆಂಗಳೂರ್ ಕೊಡ್ತೀನಿ ತಗೋ.
ಭಿಕ್ಷುಕ: ತಿನ್ನೋಕೆ ಏನಾದ್ರೂ ಕೊಡಿ ಅಂದ್ರೆ ಬೆಂಗಳೂರ್ ಕೊಡ್ತಾರಂತೆ, ಬೆಂಗಳೂರ್ ಏನ್ ನಿಮ್ದಾ?
ಗುಂಡ: ಸ್ವರ್ಗ ಸಿಗುತ್ತೆ ಅಂದ್ಯಲ್ಲ. ಅದೇನ್ ನಿಂದಾ? ನಿಮ್ಮಪ್ಪಂದಾ?

ತಿಮ್ಮ: ಭಾರತದ ಅತಿ ದೊಡ್ಡ ಸುಳ್ಳು ಯಾವುದೊ?
ಗುಂಡ: ಕಾನೂನು ಎಲ್ಲರಿಗೂ ಒಂದೇ ಅಂತ ಹೇಳುವುದು.

ಯಮರಾಜ: ಎಲೇ... ಕುಡುಕನೇ ನಿನ್ನ ಸಾವು ಹತ್ತಿರವಾಗಿದೆ. ಕೊನೆ ಆಸೆ ಏನಾದರೂ ಇದ್ದರೆ ಹೇಳು?
ಕುಡುಕ: ಹೇ ಪ್ರಭು ಮುಂದಿನ ಜನ್ಮದಲ್ಲಿ ನನಗೆ ಒಂದು ಹಲ್ಲು ಕೊಟ್ಟು, 32 ಲಿವರ್ ಕೊಡು.

ಮಗ: ಅಪ್ಪ, ನಾಳೆ ನಾನು ನಾಟಕದಲ್ಲಿ ಗಂಡನ ಪಾರ್ಟ್ ಮಾಡ್ತಾ ಇದ್ದೀನಿ.
ಅಪ್ಪ: ಯಾಕೋ ಗೂಬೆ, ಬೇರೆ ಪಾತ್ರ ಸಿಗಲಿಲ್ವೇನೋ?
ಮಗ: ಅಪ್ಪಾ, ಇದೇ ತುಂಬ ಸುಲಭದ್ದು ನಂಗೆ, ಯಾವುದೇ ಡೈಲಾಗ್ಸ್ ಹೇಳೋ ಅಗತ್ಯಾನೇ ಇಲ್ಲ ಇದ್ರಲ್ಲಿ.

ಜ್ಯೋತಿಷಿ: ನಿನ್ನಲ್ಲಿ ಮಚ್ಚೆ ಇದೆ.
ಗುಂಡ: ನನ್ನ ಸಂಕಷ್ಟದ ಸಂಕೇತವದು.
ಜ್ಯೋತಿಷಿ: ಹಾಗೇಕೆ ಅನ್ನುವೆ. ಅದು ನೀನು ಮುಂದೊಮ್ಮೆ ಮಹಾಶೂರ, ಮಹಾವೀರನಾಗುವ ಸಂಕೇತ.
ಗುಂಡ: ಸ್ವಾಮಿ, ಅದು ನನ್ನ ಹೆಂಡತಿ ಹಾಕಿದ ಬರೆ.

ಕಳ್ಳತನ ಮಾಡುವುದೇ ವೃತ್ತಿ ಮಾಡಿಕೊಂಡಿದ್ದ ಕಳ್ಳನಿಗೆ ಅವನ ಹೆಂಡತಿ ಹೀಗೆ ಕೇಳಿದಳು.
ಬೀರುವಿನಲ್ಲಿ ಇಟ್ಟಿದ್ದ ನನ್ನ ಚಿನ್ನದ ಬಳೆಗಳು, ಚಿನ್ನದ ಸರ, ಕಾಣ್ತಾ ಇಲ್ಲ. ನೀವೇನಾದ್ರೂ 'ವರ್ಕ್ ಫ್ರಂ ಹೋಂ' ಮಾಡಿದ್ರಾ?

ಸಂಗ್ರಹ: ಶರದ ಕುಲಕರ್ಣಿ, ಬೀದರ್